ಶ್ರೀ ಎನ್. ಹುಚ್ಚಮಾಸ್ತಿಗೌಡ :—ಮಾನ್ಯ ಆರ್ಥಿಕ ಸಚಿವರು ಪತ್ರಿಕಾಪ್ರತಿನಿಧಿಗಳೊಡನೆ ಸಮಾಲೋಚನೆ ಮಾಡಿದಾಗ ಹೇಳಿದ್ದು ಪತ್ರಿಕೆಯಲ್ಲಿ ವರದಿಯಾಗಿತ್ತು, ಈ ಸಭೆಯ ಮಾನ್ಯ ಸದಸ್ಯ ರೊಬ್ಬರನ್ನು ಅಂದರೆ ಶ್ರೀ ಮಾನ್ ಪ್ರಭಾಕರ್‌ರವರ ಹೆಸರನ್ನು ಈ ಸಮಿತಿಯ ಚೇರ್ಮನ್ನರಾಗಿ ಮಾಡುತ್ತಾರೆಂದು ಹೇಳಿ ಸೂಚಿಸಿತ್ತು. ಇತ್ತೀಚೆಗೆ ಅವರು ಆ ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಬಂದದ್ದರಿಂದ ಆ ಹೆಸರನ್ನೇನಾದರೂ ಬಿಟ್ಟುಕೊಡಲಾಗಿದೆಯೇ ? ಅದನ್ನೇನಾದರೂ ಸರ್ಕಾರದವರು ಗಮನದಲ್ಲಿಟ್ಟು ಕೊಂಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ :—ಇದರಲ್ಲಿ ಪಕ್ಷಾಂತರದ ದೃಷ್ಟಿಯಿಂದ ನಾವು ತೀರ್ಮಾನ ತೆಗೆದು ಕೊಳ್ಳುವುದಿಲ್ಲ. ಯಾರು ಯೋಗ್ಯರೆಂಬುದನ್ನು ನೋಡಿ ಹಾಕುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್ :—ಹೆಂಡ, ಅರ್ಯಾಕ್ ಮಾರಕ್ಕೆ ಜಾಗದಲ್ಲಿ ದೊಡ್ಡ ದೊಡ್ಡ ಬೋರ್ಡ್ ಗಳನ್ನು ಹಾಕಿ ಇಂತಿಂತಹ ದುಷ್ಪರಿಣಾಮವಾಗುತ್ತದೆ, ಹೆಂಡವನ್ನು ಕುಡಿಯಬಾರದು ಎಂದು ತಿಳಿಸಬೇಕೆಂದು ಮಾಲೀಕರ ಮೇಲೆ ಒಂದು ಒತ್ತಾಯ ತರಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ :—ಆ ರೀತಿ ಮಾಡುವುದಕ್ಕೆ ಕಷ್ಟವಾಗಬಹುದು. ಅಮೇರಿಕಾ, ಇಂಗ್ಲಂಡ್ ನಲ್ಲಿ ಸಿಗರೇಟ್ ಮೇಲೆ " ಇಂಜ್ಯೂರಿಯಸ್ ಟು ಹೆಲ್ತ್ " ಇಂತ ಬರೆದಿರುತ್ತಾರೆ. ಹಾಗೆ ಚಾಟಲ್ ಮೇಲೆ ಮಾಡಿದರೆ ಚಾಟಲ್ ನೋಡಿಕೊಂಡು ಯಾರು ಕುಡಿಯುತ್ತಾರೋ ಯಾರು ಕುಡಿಯುವುದಿಲ್ಲವೋ ಗೊತ್ತಿಲ್ಲ. ಸಮಿತಿ ಮಾಡಿ ಆ ಮುಖಾಂತರ ಈ ವಿಚಾರ ಮಾಡಲಿಕ್ಕೆ ಪ್ರಯತ್ನ ಮಾಡಬಹುದು ಅಷ್ಟೆ.

ಶ್ರೀ ಎಂ. ನಾಗಪ್ಪ:—ಈ ಟೆಂಪರೆನ್ಸ್ ಕಮಿಟಿ ಎಕ್ಸೈಜ್ ಬಗ್ಗೆ ಕಾನೂನಿನ ಪ್ರೊವಿಜನ್ಸ್ ಇಂಪ್ಲಿಮೆಂಟ್ ಮಾಡುವ ವಿಚಾರದಲ್ಲಿ ಮಂತ್ರಿಗಳಿಗೂ ಸಹ ಅಡ್ವೈಸ್ ಮಾಡಲಿಕ್ಕೆ ಅಧಿಕಾರ ಇರುತ್ತದೆಯೇ ?

M. R. SPEAKER:—The Supplimentary is disallowed as it is outside the Scope of the main question.

ಶ್ರೀ ಎಸ್. ವಿ. ಅಗ್ನಿಹೋತ್ರಿ :—ಇಂತಹ ಸಮಿತಿಯ ಚೇರ್ಮನ್ನರು ಹೆಚ್ಚಾಗಿ ಕುಡಿಯುವವರು, ಕುಡುಕರು ಇರಬೇಕೆಂದು ಮಾಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ :—ಯಾರಿಗೆ ಕುಡಿಯುವ ಚಟ ಇದೆ ಅಂಥವರೇ ಸಮಿತಿಯ ಚೇರ್ಮನ್‌ರು ಆಗಬೇಕೆಂಬ ವಿಚಾರ ಇಲ್ಲ. ಹಿಂದೆ ಕುಡಿಯುವುದನ್ನು ಕಲಿತಂಥವರು ಇದ್ದರೂ ಯೋಚನೆ ಮಾಡ. ಬಹುದು. (ನಗು).

POULTRY SECTION AT HEBBAL SERUM INSTITUTE

536. Sri G. RAMB GOWDA (Doddaballapur).—

Will the Minister of State for Veterinary Services, Animal Husbandry and Dairy Development be pleased to state :—

(*a*) since how long the poultry section attached to the Serum Institute at Hebbal is functioning ;

(*b*) the products of the poultry section

(*c*) the investment on the machinery and equipment of this section

(*d*) the establishment charges per year on this section

(*e*) the improvement proposed for this poultry section during the Fourth Five Year Plan and the amount provided for such development scheme ?

Sri G.B.SHANKAR RAO (Minister of State for Veterinary Services, Animal Husbandry and Dairy Development).—

(*a*) Poultry Disease Investigation Scheme sponsored by Indian Council of Agricultural Research was started from 1st April 1941. From 1st April 1951 the activities of the scheme have been merged with the normal activities of the Institute.

(*b*) The following biological products are produced

1	Ranikhet	Vaccine
2	F 1	do
3	Fowlpox	do
4	Fowlpox and Pigeonpox Vaccine. In addition disease in vestigation work throughout the State.	

(*c*) About Rs. 50,000-00.

(*d*) Rs. 5,100-00 per year.

(*e*) Proposal to reorganise the set up of the Institute to intensify Poultry Disease Investigation and Production of more vaccine are under active consideration.

ಶ್ರೀ ಜಿ. ರಾಮೇಗೌಡ.—ಈ ಔಷಧಿ ತಯಾರಿಸುವ ಯಂತ್ರ ಕೆಟ್ಟು ಎಷ್ಟು ವರ್ಷವಾಯ್ತು ? ರಿಪೇರಿಮಾಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಅದು ಕೆಟ್ಟುಹೋಗಿ ಎರಡು ವರ್ಷವಾಯ್ತು.

It is a foreign equipment which could not be repaired here. We tried four institutions for its repair. But at the moment we have not received any favourable reply. That is why we have requested the Government of India to allow us some foreign exchange to procure the equipment from England.

ಶ್ರೀ ಜಿ. ರಾಮೇಗೌಡ.—ಈಗ ರಾಣಿಬೇಟ್ ವ್ಯಾಕ್ಸೀನನ್ನು ಎಲ್ಲಿಂದ ತರಿಸಲಾಗುವುದು ? ಅದಕ್ಕೆ ವೆಚ್ಚವೆಷ್ಟು ತಗಲುವುದು

ಶ್ರೀ ಜಿ. ಬಿ. ಶಂಕರ ರಾವ್.— ಅದರಲ್ಲಿ ಎರಡು ರೀತಿಯದು ಇದೆ, ಒಂದು ಲಿಕ್ವಿಡ್, ಇನ್ನೊಂದು ಫ್ರೀಜ್ಡ್. ಲಿಕ್ವಿಡ್ ನಾವು ತಯಾರು ಮಾಡಿರುವುದು, ಫ್ರೀಜ್ಡ್ ವ್ಯಾಕ್ಸೀನ್ ಇಜತ್‌ನಗರ, ರಾಣಿಪೇಟೆ, ಹೈದರಬಾದು ಮತ್ತು ಬಿಜಾಪುರ ಮುಂತಾದ ಕಡೆಗಳಿಂದ ತರಿಸಲಾಗುವುದು.

ಶ್ರೀ ಎನ್. ಎ. ಚನ್ನೇಗೌಡ.—ಇಜ್ಜತ್‌ನಗರದಿಂದ ತರಿಸುವುದು ಪರಿಣಾಮಕಾರಿಯಾಗಿಲ್ಲವೆಂಬುದು ಗಮನಕ್ಕೆ ಬಂದಿದೆಯೇ ? ಎರಡು ವರ್ಷದಿಂದ ಯಂತ್ರ ಕೆಟ್ಟಿದ್ದರಿಂದ ತೊಂದರೆಯಾಗಲಿಲ್ಲವೆ ?

ಶ್ರೀ ಜಿ. ಬಿ. ಶಂಕರ ರಾವ್.—ಅದು ಫಾರಿನ್ ಎಕ್ವಿಪ್‌ಮೆಂಟ್, ಅದನ್ನು ನಮ್ಮಲ್ಲಿ ರಿಪೇರಿ ಮಾಡುವುದಕ್ಕಾಗಲ್ಲಿಲ್ಲ, ನಾಲ್ಕು ಕಡೆ ವಿಚಾರಮಾಡಿದರೂ ಸಾಧ್ಯವಾಗಲಿಲ್ಲ. ಕೇಂದ್ರ ಸರಕಾರಕ್ಕೆ ಬರೆದೆವು. ಎರಡು ಎಕ್ವಿಪ್‌ಮೆಂಟ್ ಯೂನಿಟ್ ಬೇಕೆಂದು ಕೇಳಿದ್ದೇವೆ. ಫಾರಿನ್ ಎಕ್ಸ್‌ಛೇಂಜ್ ಳ ಲಕ್ಷ ರೂಪಾಯಿ ಕೇಳಿದ್ದೇವೆ. ಅದಕ್ಕೆ ಹಣ ಈ ವರ್ಷದ ಬಡ್ಜೆಟ್ಟಿನಲ್ಲಿ ಒದಗಿಸಿದ್ದೇವೆ. ಫಾರಿನ್ ಎಕ್ಸ್‌ಛೇಂಜ್ ಕೊಡಲು ತಯಾರಿದ್ದಾರೆ. ನಮ್ಮ ದೇಶದಲ್ಲಿ ರುಪಿ ಪೇಮೆಂಟ್‌ಮೇಲೆ ಯಂತ್ರೋಪಕರಣ ಒದಗಿಸುವ ಒಂದು ಆರ್ಗನೈಸೇಷನ್ ಇರೆ. ಅದು ಯಾವುದೆಂದರೆ ಮೆಸರ್ಸ್ ಲಾರೆನ್ಸ್ ಅಂಡ್ ಮೇಯೋ, ಅವರಿಗೆ ಹೇಳಿದ್ದೆವೆ. ಅವರು ನಾಲ್ಕು ಅನುಕೂಲ ಒದಗಿಸಬೇಕೆಂದು ತಿಳಿಸಿದ್ದಾರೆ.

1) Actual user import license,
(2) Letter of authority in favour of the firm.
(3) Exemption Certificate to be obtained from the Chief Controller of Exports and Imports, New Delhi,
(4) Release of Foreign Exchange.

ಈ ನಾಲ್ಕೂ ಒದಗಿಸಿದರೆ ತರಿಸಿಕೊಡುವುದಾಗಿ ಹೇಳಿದ್ದಾರೆ.

ಶ್ರೀ ಎಸ್. ಜೆ. ಪುಟ್ಟರಂಗನಾಥ್.—ಈಗಾಗಲೇ ಲಿಕ್ವಿಡ್ ವ್ಯಾಕ್ಸೀನ್ ತಯಾರಿಸುತ್ತಿದ್ದೇವೆ ಎಂದು ಹೇಳಿದಿರಿ. ರಾಮೇಗೌಡರು ಮೇಷೀನ್ ಕೆಟ್ಟಿದೆ, ಕೆಲಸ ಮಾಡುತ್ತಿಲ್ಲ ಎಂದು ಹೇಳಿದ್ದಾರೆ, ಆದುದರಿಂದ ತಾವು ಹೇಳುವುದು ನಿಜವಲ್ಲ ಎಂಬುದನ್ನು ಒಪ್ಪುತ್ತಿರಾ ? ಕೆಟ್ಟಿರುವುದನ್ನು ರಿಪೇರಿಮಾಡಿ ಸಾಧ್ಯವಾದಷ್ಟು ಬೇಗ ಕೋಳಿ ರೋಗ ತಡೆಗಟ್ಟಲು ಪ್ರಯತ್ನಮಾಡುವಿರಾ ?

ಶ್ರೀ ಜಿ. ಬಿ. ಶಂಕರ ರಾವ್.—ಇದಕ್ಕೆ ಉತ್ತರ ಆಗಲೇ ಹೇಳಿದೆ. ಇಲ್ಲಿ ಎರಡು ರೀತಿಯ ವ್ಯಾಕ್ಸೀನ್ ಇದೆ. ಒಂದು ಲಿಕ್ವಿಡ್, ಇನ್ನೊಂದು ಫ್ರೀಜ್ಡ್. ಲಿಕ್ವಿಡ್ ವ್ಯಾಕ್ಸೀನ್ ಪ್ರಿಪೇರ್ ಮಾಡುತ್ತೆವೆ, ಮೆಷೀನ್ ಕೆಟ್ಟಿದೆ ಲಿಕ್ವಿಡ್‌ನಲ್ಲಿ ಒಂದು ದೋಷ ಇದೆ. ಅದನ್ನು ಮಾಡಲು ಯಂತ್ರ ಬೇಕಾಗಿಲ್ಲ, ಅದು ಬಹಳ ಕಾಲ ಇರುವುದಿಲ್ಲ, ಬಹಳದೂರ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಬಹಳ ದೂರದಿಂದ ತಂದರೆ ಪರಿಣಾಮಕಾರಿಯಾಗುವುದಿಲ್ಲವೆಂದು ಚನ್ನೇಗೌಡರು ಹೇಳಿದ್ದಾರೆ.

ಶ್ರೀ ಸಿದ್ದಯ್ಯ ಕಾಶೀವಂತ.—ಈ ಯಂತ್ರ ಸರಬರಾಯಿ ಮಾಡುವ ಫಾರಿನ್ ಕಂಪೆನಿ ಲಿಕ್ವಿಡೇಷನ್ನಿಗೆ ಬಂದಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಬಿ. ಶಂಕರ ರಾವ್.—೧೯೫೬ರಲ್ಲಿ ಮೇಷೀನರಿ ಕೊಟ್ಟಿರುವುದು, ೧೪ ವರ್ಷ ಹಗಲು ರಾತಿ ಉಪಯೋಗಮಾಡಿ ಇಂದು ರಿಪೇರಿ ಮಾಡಬೇಕಾಗಿದೆ. It has outlived its utility. We cannot think of repairing it. We cannot probe into the point whether the institution which supplied, has gone into liquidation or not. It is not our concern.

ಶ್ರೀ ಜಿ. ರಾಮೇಗೌಡ.—ಈ ಸೆಕ್ಷನ್ ರೀ ಆರ್ಗನೈಜ್ ಮಾಡಿ ಹೆಚ್ಚು ಉತ್ಪತ್ತಿ ಮಾಡುವುದಾಗಿ ತಿಳಿಸಿದ್ದಾರೆ: ಈ ಸಾಲಿನಲ್ಲಿ ಇದಕ್ಕೆ ಎಷ್ಟು ಹಣ ಖರ್ಚುಮಾಡಲು ಅಂದಾಜಾಗಿದೆ. ?

ಶ್ರೀ ಜಿ. ಬಿ. ಶಂಕರ ರಾವ್.—ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು ೪ ಲಕ್ಷ ಖರ್ಚುಮಾಡಿ ಯಂತ್ರೋಪಕರಣ ಹೆಚ್ಚಿಸಬೇಕು. ಸಿಬ್ಬಂದಿಯಲ್ಲಿ ೪ ಜನ ಹೆಚ್ಚುಮಾಡಬೇಕು ಎಂಬ ಯೋಜನೆ ಇದೆ. ಇದಕ್ಕಾಗಿ ನಮ್ಮ ರಾಜ್ಯದಲ್ಲಿರುವ ೪ ರೀಜನಲ್ ಕ್ಲಿನಿಕಲ್ ಲ್ಯಾಬೋರೇಟರಿಗಳನ್ನು ಬಲಪಡಿಸಲು ಅದಕ್ಕೆ ೨೦ ಸಾವಿರ ರೂಪಾಯಿ ಒದಗಿಸಲಾಗಿದೆ.